ದಿನಪತ್ರಿಕೆ ತರಲು ಅವರು ಉತ್ಸುಕರಾಗಿದ್ದಾರೆ.

ನಮ್ಮ ಜೊತೆಗಿನ ಮಾತುಕತೆಯಲ್ಲಿ ಅವರ ಸಹಾನುಭೂತಿ, ನಲ್ಮೆಗಳು ಎದ್ದುಕಂಡವು; ನಮ್ಮ ದೃಷ್ಟಿಕೋನವನ್ನು ಅರಿಯಲು ಅವರು ಕಾತರರಾಗಿದ್ದರು. ಇಂಗ್ಲೆಂಡಿನಲ್ಲಿ ಒಬ್ಬ ಅಭ್ಯರ್ಥಿಯನ್ನು ಆರಿಸುವ ಪ್ರಜಾಸತ್ತಾತ್ಮಕ ಪದ್ಧತಿಯನ್ನು ದೀರ್ಘವಾಗಿಯೇ ವಿವರಿಸಿದರು. ಅವರು ಪ್ರಜಾಪ್ರಭುತ್ವದಲ್ಲಿ ಅಪಾರ ನಂಬಿಕೆಯುಳ್ಳವರಂತೆ ಕಂಡುಬಂದರು.

ಇದು ಸಾರಾಂಶ. ನೀವು ಎಲ್ಲಿದ್ದೀರೆನ್ನುವುದು ಗೊತ್ತಿರಲಿಲ್ಲ ಹಾಗೂ ನಮ್ಮಲ್ಲಿ ಹಣವೂ ಇರಲಿಲ್ಲ. ಆದ್ದರಿಂದ ನಾವು ಇದನ್ನು ಖುದ್ದು ನಿಮಗೆ ವರದಿ ಮಾಡಲಾಗಲಿಲ್ಲ.'

ಅನಂತರದ ಪತ್ರವ್ಯವಹಾರಗಳು ಸೂಚಿಸುವಂತೆ ಅಂಬೇಡ್ಕರ್ ಹಾಗೂ ಲೋಹಿಯಾ ಪರಸ್ಪರ ಭೇಟಿಯಾಗಲು ಕಾತರರಾಗಿದ್ದರು. ಸಾಧ್ಯವಾದರೆ 1956ರ ಅಕ್ಟೋಬರ್ 20ರಂದು ಲೋಹಿಯಾ ತಮ್ಮ ಮನೆಗೆ ಬರಬಹುದು ಎಂದು ಸೂಚಿಸಿ ಅಂಬೇಡ್ಕರ್ ಪತ್ರ ಬರೆದರು. ಲೋಹಿಯಾರ ದಿನಾಂಕ ಹೊಂದಾಣಿಕೆಯಾಗದೆ ಆ ಭೇಟಿ ನಡೆಯಲಿಲ್ಲ.

ಲೋಹಿಯಾಗೆ ಪತ್ರ ಬರೆದ ಕೆಲವೇ ದಿನಗಳಲ್ಲಿ, 1956ರ ಡಿಸೆಂಬರ್ 6ರಂದು, ಅಂಬೇಡ್ಕರ್ ನಿಧನರಾದರು. ಭಾರತದ ಇಬ್ಬರು ಒರಿಜಿನಲ್ ಚಿಂತಕ–ನಾಯಕರ ಚಾರಿತ್ರಿಕ ಭೇಟಿ ತಪ್ಪಿಹೋಯಿತು. ಜಾತಿವಿನಾಶವನ್ನು ರಾಜಕಾರಣದ ಜೊತೆಗೆ ಬೆಸೆಯಬಯಸಿದ್ದ ಎರಡು ಮಹಾನ್ ಚೇತನಗಳು ಒಗ್ಗೂಡಿ ರೂಪಿಸಲಿದ್ದ ಭಾರತೀಯ ರಾಜಕಾರಣದ ಹಾದಿಯೊಂದು ಮುಂದಿನ ಪೀಳಿಗೆಗೆ ದೊರೆಯದೇ ಹೋಯಿತು. ಈ ನೆನಪು ಭಾರತೀಯ ಸಮಾಜದ ಪರಿವರ್ತನೆಯಲ್ಲಿ ನಂಬಿಕೆಯಿಟ್ಟಿರುವ ಎಲ್ಲರಲ್ಲೂ ದಟ್ಟ ವಿಷಾದ ಹುಟ್ಟಿಸುತ್ತದೆ.

ಅಂಬೇಡ್ಕರ್ ತೀರಿಕೊಂಡ ನಂತರ, 1957ರಲ್ಲಿ ಈ ಪತ್ರ ವ್ಯವಹಾರವನ್ನು ಮಧು ಲಿಮಯೆಗೆ ಕಳಿಸುತ್ತಾ ಲೋಹಿಯಾ ಬರೆದ ಪತ್ರದ ಭಾಗಗಳು:

ಪ್ರೀತಿಯ ಮಧು,

ಡಾ. ಅಂಬೇಡ್ಕರ್ ಜೊತೆಗೆ ನಡೆಸಲಾದ ಪತ್ರ ವ್ಯವಹಾರಗಳು ಸಿಕ್ಕಿವೆ. ಅವನ್ನು ಕಳಿಸುತ್ತಿರುವೆ. ಡಾ. ಅಂಬೇಡ್ಕರ್ ಅವರ ಆಕಸ್ಮಿಕ ಸಾವಿನಿಂದ ನನಗಾಗಿರುವ ವ್ಯಥೆ ವೈಯಕ್ತಿಕವಾದುದೂ ಕೂಡ ಅನ್ನುವುದನ್ನು ನೀವು ಚೆನ್ನಾಗಿ ಅರ್ಥ ಮಾಡಿಕೊಳ್ಳಬಲ್ಲಿರಿ. ಅವರನ್ನು ನಮ್ಮ ತೆಕ್ಕೆಯೊಳಗೆ ತರಬೇಕೆನ್ನುವುದು ಸಂಘಟನೆಯ ದೃಷ್ಟಿಯಿಂದಷ್ಟೇ ಅಲ್ಲದೆ, ತಾತ್ವಿಕ ದೃಷ್ಟಿಯಿಂದ ಕೂಡ ಮುಖ್ಯವಾಗಿತ್ತು, ಹಾಗೂ ಆ ಕಾಲ ಸಂಪೂರ್ಣ ಹತ್ತಿರವಾಗುತ್ತಿರುವಂತೆ ಕಾಣುತ್ತಿತ್ತು.

...ನನ್ನ ದೃಷ್ಟಿಯಲ್ಲಿ ಡಾ. ಅಂಬೇಡ್ಕರ್ ಭಾರತದ ರಾಜಕೀಯದ ಮಹಾನ್ ನಾಯಕರಾಗಿದ್ದರು; ಗಾಂಧೀಜಿಯೊಬ್ಬರನ್ನು ಹೊರತು ಪಡಿಸಿ, ಇನ್ನಾವುದೇ ದೊಡ್ಡ ಸವರ್ಣೀಯ ಹಿಂದೂ ನಾಯಕರಷ್ಟೇ ದೊಡ್ಡ ನಾಯಕರಾಗಿದ್ದರು. ಹಿಂದೂ ಧರ್ಮದಲ್ಲಿನ ಜಾತಿಪದ್ಧತಿಯನ್ನು ಒಂದಿಲ್ಲೊಂದು ದಿನ ನಾಶ ಮಾಡಬಹುದೆಂಬ ಆತ್ಮವಿಶ್ವಾಸ ಹಾಗೂ ಸಮಾಧಾನ ಈ ಅಂಶದಿಂದಲೂ ನನಗೆ ದೊರಕಿತ್ತು...

ಡಾ. ಅಂಬೇಡ್ಕರ್ ವಿದ್ವಾಂಸರಾಗಿದ್ದರು; ಪ್ರಾಮಾಣಿಕರಾದ, ಸಮಗ್ರತೆಯನ್ನುಳ್ಳ ಹಾಗೂ ಸ್ವತಂತ್ರರಾದ ವ್ಯಕ್ತಿಯಾಗಿದ್ದರು; ಭಾರತದಾಚೆಯ ಜಗತ್ತಿಗೆ ನೇರ ನಡೆನುಡಿಯ ಭಾರತದ ಪ್ರತೀಕವೆಂದು ಅವರನ್ನು ನಾವು ತೋರಿಸಬಹುದು; ಅವರು ಕಹಿಯಾಗಿದ್ದರು ಹಾಗೂ ಪ್ರತ್ಯೇಕವಾಗಿರಲು ಬಯಸುತ್ತಿದ್ದರು. ಹರಿಜನೇತರ ನಾಯಕರಾಗಲು ಅವರು ನಿರಾಕರಿಸಿದರು. 5000 ವರ್ಷಗಳ ನೋವು ಹಾಗೂ ಹರಿಜನರ ಮೇಲೆ ಅದರ ನಿರಂತರ ಪರಿಣಾಮವನ್ನು ನಾನು ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲೆ. ಪ್ರಮುಖ ಸಂಗತಿಯೊಂದು ಅಡಗಿರುವುದು ಇಲ್ಲೇ. ಡಾ. ಅಂಬೇಡ್ಕರ್ ಅವರಂಥ ಮಹಾನ್ ಭಾರತೀಯ ಆ ಸ್ಥಿತಿ ಮೀರಿ ಮೇಲೇರುವರೆಂದು ನಾನು ನಿರೀಕ್ಷಿಸಿದ್ದೆ. ಆದರೆ ಸಾವು ಅವರನ್ನು ಬೇಗ ಕೊಂಡೊಯ್ದಿತು.

ಎ.ಐ.ಎಸ್.ಸಿ.ಎಫ್. ಒಕ್ಕೂಟವನ್ನು ಈಗ ಯಾರು ನಡೆಸುತ್ತಿದ್ದಾರೋ ನನಗೆ ತಿಳಿಯದು. ಆದರೆ ಭಾರತದ ಪರಿಶಿಷ್ಟ ಜಾತಿಗಳು ಕಳೆದ ನಲವತ್ತು ವರ್ಷಗಳ ಭಾರತೀಯ ರಾಜಕೀಯವನ್ನು ವಿವೇಚನೆಯಿಂದ ಅಳೆದು ತೂಗಿ ನೋಡಬೇಕೆಂದು ನನ್ನ ಆಸೆ. ಈ ಜಾತಿಗಳು ಡಾ. ಅಂಬೇಡ್ಕರ್ ಅವರನ್ನು ತಾವು ಅನುಕರಿಸಬೇಕಾದ, ಅಪಾರ ಗೌರವದ ನಾಯಕನ ಪ್ರತೀಕವನ್ನಾಗಿಸಿಕೊಳ್ಳಬೇಕು. ಜೊತೆಗೆ, ಅಂಬೇಡ್ಕರ್‌ರಲ್ಲಿದ್ದ ಕಹಿಯನ್ನು ಬಿಟ್ಟು, ಅವರ ಸ್ವತಂತ್ರ ಮನೋಭಾವವನ್ನು ಅನುಸರಿಸಬೇಕು. ಬರಿ ಹರಿಜನರ ನಾಯಕರೆಂದಷ್ಟೇ ಅಲ್ಲ, ಇಡೀ ಭಾರತದ ನಾಯಕರಾಗಿ ಕಾರ್ಯಪ್ರವೃತ್ತರಾಗಬಲ್ಲ ಡಾ. ಅಂಬೇಡ್ಕರರನ್ನು ಅವರು ಅನುಸರಿಸಬೇಕು.'

ಆಧುನಿಕ ಭಾರತದ ಎರಡು ಮಹಾಶಕ್ತಿಗಳ ಸಂಗಮದಿಂದ ಭಾರತೀಯ ರಾಜಕಾರಣಕ್ಕಷ್ಟೇ ಅಲ್ಲ, ಭಾರತೀಯ ಸಮಾಜಕ್ಕೂ ದಕ್ಕಬಹುದಾಗಿದ್ದ ದೊಡ್ಡ ತಿರುವೊಂದರ ಸಾಧ್ಯತೆ ತಪ್ಪಿಹೋಯಿತು. ಆದರೂ ಈ ಮಹಾನ್ ಚೇತನಗಳು ಒಗ್ಗೂಡುವ ನಿಟ್ಟಿನಲ್ಲಿ ಯೋಚಿಸಿದ್ದವು ಎಂಬ ರೋಮಾಂಚಕ ಸಂಗತಿ ಭಾರತೀಯ ರಾಜಕಾರಣದಲ್ಲಿ ಆಗಾಗ್ಗೆಯಾದರೂ ಸ್ಫೂರ್ತಿ ಉಕ್ಕಿಸಿದೆ; ಹೊಸ ಹಾದಿ ತೋರುತ್ತಾ ಬಂದಿದೆ. ಮುಂದೂಡಲ್ಪಟ್ಟ ಕನಸು ಮಾನವ ಮನಸ್ಸನ್ನು ಬಹು ಕಾಲ ಕಾಡುವಂತೆ ಈ ಮಹಾಸಂಗಮದ ಕನಸು ಭಾರತದ ಸೂಕ್ಷ್ಮಜೀವಿಗಳನ್ನು, ಜಾತ್ಯತೀತ ರಾಜಕಾರಣಿಗಳನ್ನು ಆಗಾಗ ಕಾಡಿದೆ.

ಇಂಥ ದೊಡ್ಡ ಕನಸನ್ನು ಮುಂದೊಯ್ಯಬಲ್ಲ ಉತ್ಸಾಹಿಗಳು ಅಂಬೇಡ್ಕರ್, ಲೋಹಿಯಾರಂಥ ದೊಡ್ಡ ದಾರ್ಶನಿಕರಾಗುವುದು ಸುಲಭವಿರಲಿಲ್ಲ. ಆದರೂ, ಈ ಕಾಲದ ಬಹುಜನ ಸಮಾಜ ಪಕ್ಷ, ಸಮಾಜವಾದಿ ಪಕ್ಷ, ರಾಷ್ಟ್ರೀಯ ಜನತಾದಳದಂಥ ಪಕ್ಷಗಳು ಈ ಎರಡೂ ಮಾರ್ಗಗಳ ತೆಳುವಾದ, ಸೀಮಿತವಾದ, ರಾಜಕೀಯ ಸಮೀಕರಣವನ್ನಾದರೂ ಸಾಧಿಸಲು ಆಗಾಗ ಪ್ರಯತ್ನಿಸಿವೆ.

ಕರ್ನಾಟಕದಲ್ಲಿ 2006ರಲ್ಲಿ ರೈತ ಚಳುವಳಿ, ದಲಿತ ಚಳುವಳಿಗಳು ಒಂದಾಗಿ ರಾಜಕೀಯ ಪಕ್ಷ ಮಾಡುವ ಸಂದರ್ಭ ಬಂತು. ಆಗ ದೇವನೂರ ಮಹಾದೇವ ಲೋಹಿಯಾ–ಅಂಬೇಡ್ಕರ್ ನಡುವೆ ನಡೆಯದೆ ತಪ್ಪಿ ಹೋದ ಆ ಚಾರಿತ್ರಿಕ ಭೇಟಿಯನ್ನು ನೆನೆದು ಮುಂದೆ ಸಾಗಬೇಕು' ಎಂದಿದ್ದರು. ಅದು ಕೂಡ ಕರ್ನಾಟಕದ ರಾಜಕೀಯ ಚರಿತ್ರೆಯ ಭಾಗವಾಗಿದೆ.

ಮತ್ತೆ ಡಾಕ್ಟರ್ ಸಾಹೇಬರ ಜೀವನಯಾನದ ರಾಜಕೀಯ ಘಟ್ಟಗಳಿಗೆ ಮರಳೋಣ!

1957ರ ಸಾರ್ವತ್ರಿಕ ಚುನಾವಣೆಗಳು ಹತ್ತಿರವಾಗುತ್ತಿದ್ದವು. ಲೋಹಿಯಾ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದರು. ಇತ್ತ ಲೋಹಿಯಾರ ಪ್ರಿಯ ಶಿಷ್ಯ ಗೋಪಾಲಗೌಡರು ಮತ್ತೆ ವಿಧಾನಸಭೆಗೆ ಸ್ಪರ್ಧಿಸಿದರು. ಲೋಹಿಯಾರ ಪ್ರಿಯ ಸಂಗಾತಿ ರಮಾ ಮಿತ್ರ ಲೋಕಸಭೆಗೆ ಸ್ಪರ್ಧಿಸಿದರು.

ಮೂವರೂ ಚುನಾವಣೆಯಲ್ಲಿ ಸೋತರು. ಪಿಎಸ್‌ಪಿ ಹಾಗೂ ಸಮಾಜವಾದಿ ಪಕ್ಷಗಳ ಮತಗಳು ವಿಭಜನೆಗೊಂಡು ಹಿನ್ನಡೆ ಅನುಭವಿಸಿದ್ದವು

ಫಲಿತಾಂಶದ ನಂತರ ಲೋಹಿಯಾ ರಮಾಗೆ ಬರೆದ 28 ಮಾರ್ಚ್ 1957ರ ಪತ್ರ:

'ಪ್ರಿಯ ಇಳಾ,

ಬನಾರಸ್ ಕಾರ್ಯಕ್ರಮ ಏಪ್ರಿಲ್ 10–11ರಂದು. ಹೋಟೆಲ್ ಸಾರನಾಥದಲ್ಲಿರಲು ಯೋಚಿಸಿದ್ದೇನೆ... ಏಪ್ರಿಲ್ 29ರಂದು ಮಥುರಾದಲ್ಲಿರುತ್ತೇನೆ. ಕೃಷ್ಣ ಬಳಸುತ್ತಿದ್ದ ಮಥುರಾ, ಬೃಂದಾವನಗಳ ಮಾರ್ಗಗಳನ್ನು ಕಲ್ಪನೆಯ ಮೂಲಕ ಹಾಗೂ ನಿಖರವಾಗಿ ಪತ್ತೆ ಹಚ್ಚಲು ಪ್ರಯತ್ನ ಮಾಡುತ್ತಿದ್ದೇನೆ. ದಯವಿಟ್ಟು ಈ ಎರಡೂ ಸಾಧ್ಯವಾಗುವಂತೆ ಸಹಾಯ ಮಾಡು. ಚುನಾವಣೆಯಲ್ಲಿ ಸೋತ ಇಬ್ಬರೂ ಒಬ್ಬರಿಗೊಬ್ಬರು ಆಸರೆಯಾಗಬಹುದು. ನೀನು ಬರುವುದಾದರೆ ಸಾರನಾಥ ಹೋಟೆಲಿನಲ್ಲಿ ಕೊಠಡಿ ಕಾಯ್ದಿರಿಸಲು ಜಯನಾಥನಿಗೆ ಬರೆದು ತಿಳಿಸು...

ಹೃದಯದಲ್ಲಿ ಎಷ್ಟೇ ನೋವಿದ್ದರೂ– ಹಾಗೆ ನೋಡಿದರೆ, ನೋವು ಇರುವ ಕಾರಣದಿಂದಾಗಿಯೇ– ನಾವು ನಮ್ಮ ಕರ್ತವ್ಯ ಮಾಡುತ್ತಿರಬೇಕಾಗುತ್ತದೆ. ಸಮಾಜವಾದಿ ಪಕ್ಷಕ್ಕಾಗಿ ಯುದ್ಧ ಮುಂದುವರಿಯಲೇಬೇಕು.'

ರಮಾ ಮಿತ್ರಾಗೆ ಪತ್ರ ಬರೆದಾಗ ಈ ಸೂಕ್ಷ್ಮ ರಾಜಕಾರಣಿಯ ಆಳದ ನೋವು, ತುಡಿತ, ತಲ್ಲಣಗಳೆಲ್ಲ ಹೊರಚೆಲ್ಲಿಕೊಳ್ಳುತ್ತಿದ್ದವು. ಲೋಹಿಯಾರ ಅಮೆರಿಕದ ಭೇಟಿಯಲ್ಲಿ ಕಾದಂಬರಿಕಾರ್ತಿ ಪರ್ಲ್ ಎಸ್. ಬಕ್ 'ಇಂಡಿಯಾದಲ್ಲಿ ಒಂದು ಸೆಲ್ಫ್ ಇನ್ನೊಂದು ಸೆಲ್ಫ್ ಅನ್ನು ಸಂಧಿಸುತ್ತದೆಯೆ?' ಎಂದು ಕೇಳಿದ್ದರು; ಆಗ ಲೋಹಿಯಾಗೆ ಉತ್ತರ ಹೊಳೆದಿರಲಿಲ್ಲ.

ರಮಾ ಸಖ್ಯದಲ್ಲಿ ಲೋಹಿಯಾಗೆ ಈ ಪ್ರಶ್ನೆಗೆ ಉತ್ತರ ದೊರೆತಿರಬಹುದಾದ ಸೂಚನೆಗಳಿವೆ!

(ಸಶೇಷ)